ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರು ಹೇಳಿರತಕ್ಕ ಮೊದಲನೇ ಪ್ರಶ್ನೆಯ ಅರ್ಧ ಭಾಗ ಸರಿ. ಅಂದರೆ ನಾನ್ ಮೊಲಾಸಿಸ್ ಬೇಸಿಗೆ ಅಂದರೆ ಮರಗೆಣಸು ಮತ್ತೊಂದನ್ನು ಉಪಯೋಗಿಸಿ ಮದ್ಯವನ್ನು ತಯಾರಿಸಬೇಕೆಂದು ಲೈಸೆನ್ಸ್ ಕೊಟ್ಟಿರುವುದು. ಆದರೆ ರಾಜ್ಯಕ್ಕೆ ಹೆಚ್ಚಿಗೆ ವರಮಾನ ತರಬೇಕೆಂಬ ದೃಷ್ಟಿಯಿಂದ ಈ ಮಧ್ಯೆ ಏನು ಮಾಡಿದ್ದಾರೆಂದರೆ ಕಾಕಂಬಿ ಮತ್ತು ಮದ್ಯಸಾರವನ್ನು ಉಪಯೋಗ ಮಾಡಿ ಹೆಚ್ಚಿನ ರೀತಿಯಲ್ಲಿ ಮದ್ಯ ತಯಾರಿಸುವುದಕ್ಕೆ ಈ ಎರಡು ಡಿಸ್ಟಿಲರಿಗಳಿಗೆ ಲೈಸೆನ್ಸ್ ಕೊಟ್ಟಿರತಕ್ಕದ್ದು ರೆಕಾರ್ಡ್ ಪ್ರಕಾರ ತಿಳಿದುಬರುತ್ತದೆ.

ಶ್ರೀ ಸಿ. ಬೈರೇಗೌಡ : ಇಲ್ಲಿ ಸರ್‌ಪ್ಲಸ್ ಮೊಲಸಿಸ್ ಎಂದು ಹೇಳುತ್ತಿದ್ದೀರಿ. 6 ಲಕ್ಷ ಲೀಟರ್ ಮತ್ತು 2 ಲಕ್ಷದ 24 ಸಾವಿರ ಲೀಟರ್ ಮದ್ಯವನ್ನು ಕೊಟ್ಟಂತಹ ಸಂದರ್ಭದಲ್ಲಿ ಸರ್‌ಪ್ಲಸ್ ಮೊಲಾಸಿಸ್ ಎಷ್ಟಿತ್ತು ಮತ್ತು ಅದೇ ರೀತಿ ಇವರು ಕೊಡಬೇಕಾಗಿದ್ದರೆ ಬೇರೆ ಲೈಸೆನ್ಸ್ ಹೊಲ್ಡರ್ಸ್ ಏನಿದ್ದಾರೆ, ಅವರ ಒಂದು ರಿಕ್ವೈರ್‌ಮೆಂಟ್ ಎಷ್ಟಿತ್ತು? ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಸ್.ಬಂಗಾರಪ್ಪ : ಈ ಎರಡು ಜನರಿಗೆ ಅಂದರೆ ದಾಸಪ್ಪ ಅಂಡ್ ಸನ್ಸ್ ಮತ್ತು ಹೆಚ್.ಇ. ಡಿಸ್ಟಿಲರೀಸ್‌ನವರಿಗೆ ಕೊಟ್ಟಿರತಕ್ಕದ್ದು. ನಾವು ಯಾರಿಗೇ ಆಗಲಿ ಸಪ್ಲೈ ಮಾಡಬೇಕಾದರೆ ಮೊದಲು ಲೈಸೆನ್ಸ್ ಪ್ರಕಾರ ಕೊಡುತ್ತೇವೆ. ಏಕೆಂದರೆ ಮೊಲಾಸಿಸ್ ಒಂದೊಂದು ಸಾರಿ ಕಡಿಮೆ ಬರುತ್ತದೆ. ಒಂದೊಂದು ಸಾರಿ ಜಾಸ್ತಿ ಬರುತ್ತದೆ. ಇದು ಜಾಸ್ತಿ ಬಂದಾಗ ಅದು ಹಾಳಾಗುತ್ತದೆ. ಅಂಥ ಸಂದರ್ಭಗಳಲ್ಲಿ ಹೆಚ್ಚಿಗೆ ಪರವಾನಗಿ ಕೊಟ್ಟು ಅದರಿಂದ ನಮಗೆ ವರಮಾನ ಬರುವ ದೃಷ್ಟಿಯಿಂದ ಆ ರೀತಿ ಸರಬರಾಜು ಮಾಡುವ ಪದ್ಧತಿಯನ್ನು ಇಟ್ಟುಕೊಂಡು ಬಂದಿದ್ದಾರೆ. ಇದು ಹಿಂದಿನಿಂದ ಜಾರಿಯಲ್ಲಿ ಬಂದಿರತಕ್ಕದ್ದು. ಇದು ಮೊದಲೆ ಕೊಟ್ಟಿರತಕ್ಕದ್ದು; ನಾವು ಕೊಟ್ಟದ್ದು ಅಲ್ಲ. ವರಮಾನದ ದೃಷ್ಟಿಯಿಂದ ಮಾಡಿರಬೇಕೆಂಬುದು ರೆಕಾರ್ಡ್ ಪ್ರಕಾರ ಗೊತ್ತಾಗುತ್ತಿದೆ. ಇದು ಎಲ್ಲರಿಗೂ ಹಂಚಿಕೆ ಆದ ಮೇಲೆ ಉಳಿದಿರುವಂತಹ ಮೊಲಾಸಿಸ್.

ಶ್ರೀ ಕೆ.ಹೆಚ್. ರಂಗನಾಥ್ : ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ, ನಾನ್ ಮೊಲಾಸಿಸ್ ಬೇಸ್ಡ್ ಕೆಲವು ಮೊಲಾಸಿಸ್ ಅನ್ನು ಬಳಕೆ ಮಾಡತಕ್ಕದ್ದು ಎಂದು. ಮೊದಲೇ ನಾನ್ ಮೊಲಾಸಿಸ್ ಅನ್ನು ಉಪಯೋಗ ಮಾಡಿ ಸ್ಪಿರಿಟ್ ಮಾಡಬೇಕೆಂದು ಇತ್ತು; "ಕಂಡೀಷನ್ ಅನ್ನು ಯಾವಾಗ ಬದಲಾವಣೆ ಮಾಡಿದ್ದೀರಿ? ಬದಲಾವಣೆ ಮಾಡಿದ ಮೇಲೆ ಅವರು ಪ್ರೊಡಕ್ಷನ್ ಮಾಡತಕ್ಕದ್ದರಲ್ಲಿ ಎಷ್ಟು ಪರ್ಸೆಂಟೇಜ್ ಮೊಲಾಸಿಸ್ ಅನ್ನು ಉಪಯೋಗ ಮಾಡಿ ಮದ್ಯ ತಯಾರಿಸುತ್ತಿದ್ದಾರೆ. ಮತ್ತು ನಾನ್ ಮೊಲಾಸಿಸ್ ಅನ್ನು ಉಪಯೋಗ ಮಾಡಿ ಮದ್ಯವನ್ನು ತಯಾರಿಸುತ್ತಿದ್ದಾರೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರಿಸುತ್ತೇನೆ. ಏಕೆಂದರೆ ಈ ರೀತಿ ಪರವಾನಗಿಯನ್ನು ಬಹಳ ಹಿಂದೆಯೇ ಕೊಟ್ಟಿದ್ದಾರೆ. ಆ ತಾರೀಖು ಈಗ ನನ್ನ ಹತ್ತಿರ ಇಲ್ಲ; ಅದನ್ನು ತಮಗೆ ತರಿಸಿಕೊಡುತ್ತೇನೆ.

ಬಿಡ್ಡುದಾರರಿಂದ ಬರಬೇಕಾದ ಬಾಕಿಗಳು

20 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು), ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಅಬಕಾರಿ ಇಲಾಖೆಯಲ್ಲಿನ ಬಿಡ್ಡುದಾರರಿಂದ ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಹಣದ ಒಟ್ಟು ಮೊತ್ತವೆಷ್ಟು;

ಆ) ಆ ಪೈಕಿ ಲಕ್ಷಕ್ಕಿಂತ ಹೆಚ್ಚಿಗೆ ಬಾಕಿ ಇರುವವರ ಹೆಸರುಗಳೇನು?

ಇ) *ಈ ಮೇಲ್ಕಂಡ ಬಾಕಿದಾರರಲ್ಲಿ ಕೋರ್ಟಿಗೆ ಹೋಗಿರುವ ಬಿಡ್ದುದಾರರ ಸಂಖ್ಯೆ ಎಷ್ಟು ಹಾಗೂ ಅವರು ಕೊಡಬೇಕಾಗಿರುವ ಬಾಕಿ ಹಣದ ಮೊತ್ತವೆಷ್ಟು;*

ಈ) *ಸದರಿ ಹಣವನ್ನು ಆತಿ ಜಾಗ್ರತೆಯಾಗಿ ವಸೂಲಿ ಮಾಡುವ ಯೋಜನೆಯೇನಾದರು ಸರ್ಕಾರದ ಮುಂದೆ ಇದೆಯೇ;*

ಉ) *ಹಾಗಿದ್ದಲ್ಲಿ, ಅಂತಹ ಯೋಜನೆಯ ವಿವರಗಳೇನು?*

ಶ್ರೀ ಕೆ. ಶಿವಮೂರ್ತಿ, (ಅಬಕಾರಿ ರಾಜ್ಯ ಸಚಿವರು)

ಅ) ದಿನಾಂಕ 31.12.1990ರವರೆಗೆ ಸರ್ಕಾರಕ್ಕೆ ಬಾಕಿ ಬರಬೇಕಾಗಿರುವ ಒಟ್ಟು ಹಣ ರೂ. 77.68 ಕೋಟಿ ಆಗಿರುತ್ತದೆ.

ಆ) ಪಟ್ಟಿ ಲಗತ್ತಿಸಿದೆ.

ಇ) ದಿನಾಂಕ 31.12.90ರವರೆಗೆ

ಸಂಖ್ಯೆ : 94

ಸುಮಾರು 46.50 ಕೋಟಿ ರೂ.ಗಳು

ಈ) ಹೌದು.

ಉ) ಕೋರ್ಟಿನ ತಡೆಯಾಜ್ಞೆಯನ್ನು ತೆರವು ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಬಾಕಿ ವಸೂಲು ಮಾಡಲು ಕರ್ನಾಟಕ ಭೂಕಂದಾಯ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಂಡಿರುತ್ತಾರೆ.

ANNEX XII

List of the bidders who owe more than Rs.Ten Lakhs for the period upto 30.6.1990

Sl. No.	*Name of the Defaulter*	*Amount due*
1	2	3
BANGALORE URBAN		
	SRIYUTHS :	
1.	Rajeshwari Enterprises	2,19,01,840
2.	H.E.Panduranga	2,21,01,100
BANGALORE RURAL		
1.	H.R.Gurappa	14,20,100
2.	Rajeshwari Enterprises	88,55,396
BELGAUM DISTRICT		
1.	S.R.Jorapur, Khanapur	11,00,000
2.	L.R. Jarkiholi, Gokak	45,41,067

3. M/s. V.S.Hosahalli & Co., Savadathi Taluk	10,06,001
4. K.G.Balakrishna, Belgaum	1,20,77,414
5. N.Ramanna, Bompur	15,58,169
6. M.B.Pujari, Gokak	18,00,000
7. K.T.Venkatesh Gowda	12,13,062
8. M.Guruswamy, Bellary	16,33,315
BELLARY DISTRICT	
1. Rayadurga & Co.	53,58,744
2. M.N. Yellappa	17,93,660
3. M.Guruswamy	35,65,105
4. Dasappa & Sons	16,92,485
5. Indarajit Ghorpade, Sondur	14,37,971
BIJAPUR DISTRICT	
1. Y.J.Torgal	44,19,940
2. G.Manjunath	18,83,295
3. Vajreshwar & Co.	21,30,000
4. D.R.Dharmayath	15,39,245
5. Panduranga Traders	10,18,250
6. S.K.Torpe	12,26,907
CHICKMAGALUR	
1. M.B.Deve Gowda	13,80,535
2. H.Dasappa & Sons	11,84,686
3. H.S.Pakirappa	20,17,409
4. C.V.Shankar	16,05,000
5. C.S.Vijaya Kumar	22,34,522
6. Satish Chandra Hegde & Co.	17,02,160
CHITRADURGA	
1. H.Dasappa & Sons	84,86, 256
2. Nagaraj & Co.	10,11,151
3. H.S.pakeerappa	47,92,707

DAKSHINA KANNADA

1.	M/s. A.J.Shetty, Family Trust, Mangalore	32,45,850
2.	A.Venugogal, Kankanadi, Mangalore	1,04,88,598
3.	A.J. Shetty, Excise Contractor, Mangalore	4,53,62,632
4.	Satishchandra & Co., Udupi	1,75,69,190
5.	A Devadas, Mangalore	1,56,39,583
6.	Ashok Kamath, Karkala	39,18,886
7.	Sudhakar Rao, Baikady, Mangalore	11,15,403
8.	Niranjan, Mangalore	22,53,500

DHARWAD DISRTRICT

1.	M/s. Satishchandra & Co., Udupi	84,92,284
2.	M/s.H.Dasappa & Sons, Bangalore	20,29,083
3.	K.V.Prabhakar, Hassan	41,05,060
4.	M.Basavarajappa, Bellary	11,11,148
5.	K.T.Venkatesh Gowda, Hassan	10,48,145
6.	M/s Venkateshwar & Co., Hyderabad	13,92,461
7.	M/s.Ravi & Co., Gadag	14,53,865
8.	D.R.Dharmayath, Ron.	20,74,087
9.	K.L.Vittalsa, Bangalore	25,36,129

GULBARGA

1.	M/s.SI.N.Traders,Gulbarga.	41,68,400
2.	S.Sathyanarayan,Gulbarga	31,01,247
3.	Parashuram,Chitapur Tq.	18,72,404
4.	Venkanagowda,Yadgir Tq.	12,53,370
5.	Bheemayya,Shorapur Tq.	14,75,143
6.	K.Laxmana Rao,Gulbarga.	99,72,927
7.	K.Puttaraju,Gulbarga.	1,06,21,413
8.	H.R.Vijayakumar, Gulbarga.	56,08,900

HASSAN

1.	K.T.Venkate Gowda.	59,14,022
2.	C.V.Range Gowda.	29,54,754
3.	K.C.George.	17,37,859

4.	Rajan Enterprises.	23,56,592
5.	Tirumala Traders.	1,44,84,665
6.	G.Sudhakar.	1,07,77,218.

KODAGU

1.	T.John	11,96,000
2.	Josep Michael	30,17,500
3.	N.Krishna	17,85,000
4.	T.S.Sidharthan	21,00,000
5.	H.Sudheer Shetty	15,24,800

KOLAR

1.	Srinivasa Enterprises	22,05,559
2.	Dasappa&Sons	13,53,292
3.	K.Gopal	14,67,710
4.	G.Ramakrishnappa	12,69,647
5.	J.V.Narayanaswamy	16,32,955
6.	M.Ganga reddy	33,33,482

MANDYA DISTRICT

1.	C.Rajamallaiah,Bangalore	1,76,71,600
2.	T.V.Sarangadharan,Trichur, Kerala State.	37,47,632
3.	Narase Gowda,Nagamangala.	15,67,338
4.	M/s.Sowcar Thimappa,Mysore.	14,28,120
5.	M/s.Thirumala Traders,Hassan.	99,44,864
6.	Dasappa & Sons,Bangalore.	36,91,983
7.	C.V.Ranggeowda,Hassan	15,13,824
8.	K.Vevkatesh Dutt,Bangalore.	63,92,723
9.	K.R.Swamy,Bangalore.	10,91,600
10.	Puttaswamy Gowda,Tiptur	13,60,231
11.	Sudakar Rao. Karkala.	23,11,412
12.	V.Gurappa, Prop., Srinivasa-Associates, Saraswathipuram,Mysore.	89,09,940

MYSORE DISTRICT

1.	M/s.H.Dassppa & Co.,Bangalore.	60,88,500
2.	M/s.Anjappa & Co.,Mysore	11,16,028

3.	M/s.H.Dasappa & Sons, Bangalore.	1,14,43,178
4.	M/s.Vijaya Enterprises, Chamarajanagar.	10,85,049
5.	Puttaraju,Hassan	32,95,000
6.	M.K.Srinivas,Mysore.	13,87,350
7.	V.Gurappa,M/s.Srinivasa Associates, Mysore.	26,08,650
8.	M/s.Srinivasa & co.,Mysore.	35,17,865
9.	M/s.Raja Rajeshwari & Co., Mysore.	31,00,000
10.	K.V.Prabhakaran, Mysore.	1,06,32,900

RAICHUR

1.	Devi Enterprises	30,05,120
2.	S.J.Itagi	14,46,165
3.	A.Hanumanthappa	12,94,832
4.	D.P.Sharma	16,24,627
5.	B.K.Kalal	11,93,104

SHIMOGA

1.	M/s.H.Dasappa & Sons, Bangalore	32,58,808
2.	P.K.Shankaranarayana	56,61,390
3.	P.Kasim Vali, Tirtahalli	17,77,946
4.	D.Nagaraj,Shimoga	41,42,176
5.	M.P.Shivalingappa,Shimoga	40,46,476

TUMKUR DISTRICT

1.	Narasegowda,Mandya	10,46,080
2.	S.Sathyanarayana,Bellary	15,19,076
3.	Mehabub Dual,Bellary.	10,30,642
4.	N.Nagaraj & Co., Tumkur.	34,79,205
5.	B.Laxmanagowda, S/o.Vittal Patel Bolluram Village, Yellareddy Palya Taluk,Nizamabad Dist.(A.P.)	65,60,646
6.	Harsha Kankal,Tumkar	18,39,885

UTTARA KANNADA

1.	P.K.Shankaranarayanan, Trichur Dist.,Kerala.	11,98,844

3.	M/s.H.Dasappa & Sons, Bangalore.	1,14,43,178
4.	M/s.Vijaya Enterprises, Chamarajanagar.	10,85,049
5.	Puttaraju,Hassan	32,95,000
6.	M.K.Srinivas,Mysore.	13,87,350
7.	V.Gurappa,M/s.Srinivasa Associates, Mysore.	26,08,650
8.	M/s.Srinivasa & co.,Mysore.	35,17,865
9.	M/s.Raja Rajeshwari & Co., Mysore.	31,00,000
10.	K.V.Prabhakaran, Mysore.	1,06,32,900

RAICHUR

1.	Devi Enterprises	30,05,120
2.	S.J.Itagi	14,46,165
3.	A.Hanumanthappa	12,94,832
4.	D.P.Sharma	16,24,627
5.	B.K.Kalal	11,93,104

SHIMOGA

1.	M/s.H.Dasappa & Sons, Bangalore	32,58,808
2.	P.K.Shankaranarayana	56,61,390
3.	P.Kasim Vali, Tirtahalli	17,77,946
4.	D.Nagaraj,Shimoga	41,42,176
5.	M.P.Shivalingappa,Shimoga	40,46,476

TUMKUR DISTRICT

1.	Narasegowda,Mandya	10,46,080
2.	S.Sathyanarayana,Bellary	15,19,076
3.	Mehabub Dual,Bellary.	10,30,642
4.	N.Nagaraj & Co., Tumkur.	34,79,205
5.	B.Laxmanagowda, S/o.Vittal Patel Bolluram Village, Yellareddy Palya Taluk,Nizamabad Dist.(A.P.)	65,60,646
6.	Harsha Kankal,Tumkar	18,39,885

UTTARA KANNADA

1.	P.K.Shankaranarayanan, Trichur Dist.,Kerala.	11,98,844

MYSORE DISTRICT

1.	M/s Ranganatha Syndicate, Mysore.	1,90,25,300/-
2.	Sri.Bheemappa. Nanjangud.	15,50,100/-
3.	M/s Guru Enterprises, Kollegal Tq.,	39,38,900/-
4.	Sri.S.R.Rajan,Chamarajanagar.	20,91,925/-
5.	M.K.Potharaju.	23,00,200/-
6.	T.Shivakumar, K.R.Nagar Taluk	23,68,525/-

RAICHUR DISTRICT

1.	Shri Sudarshann A.Sindhe.	28,90,090/-

TUMKUR DISTRICT

1.	K.V.Ajayakumar	27,40,000/-
2.	H.D.Ramachandra.	15,26,100/-
3.	Nanje Gowda.	12,34,300/-

HASSAN DISTRICT

1.	M/s Sharada Enterprices	42,75,000/-
2.	P.Radhakrishna	34,77,000/-

CHITRADURGA DISTRICT

1.	M.Ramachandrappa	65,07,000/-
2.	D.A.Sudharshan	10,65,480/-
3.	M.G.Basavaraju	13,11,300/-

DAKSHINA KANNADA DISTRICT

1.	M/s Malnad Traders.	1,71,18,000/-
2.	M/s A.G.Shetty & Co.,	1,68,40,800/-
3.	M/s Satishchandra Hegde F.T.Udupi.	2.62,69,200/-
4.	K.K.Mohan Das	42,72,000/-

UTTARA KANNADA DISTRICT

1.	Jatin V.Attavar.	15,03,135/-

ಶ್ರೀ ಎಂ.ವಿ. ವೆಂಕಟಪ್ಪ: ತಮ್ಮ ಉತ್ತರದಲ್ಲಿ ಬಾಕಿದಾರರ ಹಣವನ್ನು ಅತೀ ಜಾಗ್ರತೆ ವಸೂಲ್ಮಾಡುವುದಕ್ಕೆ ಏನು ಮಾಡುತ್ತೀರಿ ಎಂದುದಕ್ಕೆ ಕೋರ್ಟಿನ ತಡೆಯಾಜ್ಞೆಯನ್ನು ತೆರವು ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದೀರಿ. ಹೈಕೋರ್ಟಿನಲ್ಲಿ ಈ ತಡೆಯಾಜ್ಞೆಯನ್ನು ತೆರವು ಮಾಡಿಸಿದರೆ ಅವರು ಸುಪ್ರೀಂ ಕೋರ್ಟಿಗೆ ಹೋಗುತ್ತಾರೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟುಗಳಲ್ಲಿ ಕೋಟ್ಯಾಂತರ ರೂಪಾಯಿ ವ್ಯವಹಾರ ಕೇಸುಗಳು ಇರುವಾಗ ಕೋರ್ಟಿನವರೇ ಇಂಟರೆಸ್ಟ್ ವೇವ್ ಆಫ್ ಮಾಡುವುದು 25 ಪರ್ಸೆಂಟ್ 50 ಪರ್ಸೆಂಟ್ ಅಥವಾ ಪೂರಾ ವೇವ್ ಆಫ್ ಮಾಡುವ ಚಾನ್ಸಸ್

ಇರುತ್ತದೆ. ಆದುದರಿಂದ ಬಾಕಿದಾರರು ಏನಿದ್ದಾರೆ,ಅವರು ಪೂರಾ ಹಣವನ್ನು ಸರ್ಕಾರಕ್ಕೆ ಕೊಡುವ ಹಾಗೆ ಇದ್ದರೆ ಸರ್ಕಾರದವರೇ ಏತಕ್ಕೆ ಇಂಟರೆಸ್ಟ್ ವೇವ್ ಆಫ್ ಮಾಡಬಾರದು, ಏಕೆಂದರೆ ಈ 46 ಕೋಟಿ ರೂಪಾಯಿ ಏನು ಸಾಮಾನ್ಯ ಹಣ ಅಲ್ಲ, ಈ ಹಣವನ್ನು ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೆ, ಈ ವಿಚಾರವನ್ನು ಕೂಡ ನಾವು ಒಂದು ಸಾರಿ ಚರ್ಚೆ ಮಾಡಿದ್ದೇವೆ. ಇದು ಬಹಳ ಒಳ್ಳೆಯ ಸಲಹೆ. ಏಕೆಂದರೆ ಹಲವಾರು ವರ್ಷಗಳಿಂದ ಹಾಗೇ ಬಾಕಿ ಬಿದ್ದಿರುತ್ತದೆ. ಕೋರ್ಟಿನಲ್ಲಿ ಕೇಸ್ಗಳು ಸಿಕ್ಕಿಹಾಕಿಕೊಂಡು ಬಿಟ್ಟಿರುತ್ತದೆ. ಈ ಕಡೆ ಪ್ರಿನ್ಸಿಪಲ್ ಹಣವೂ ಬರುವುದಿಲ್ಲ ಬಡ್ಡಿಯೂ ಬರುವುದಿಲ್ಲ. ಅನೇಕ ವರ್ಷಗಳಿಂದ ಬಾಕಿ ಇರುವುದರ ಪಟ್ಟಿ ನನ್ನ ಗಮನಕ್ಕೆ ಬರುತ್ತಿದೆ. ನಾವು ಪ್ರಿನ್ಸಿಪಲ್ ಹಣ ಕಳೆದುಕೊಳ್ಳಬೇಕು ಎಂದು ಅಲ್ಲ. ಅದಕ್ಕೆ ಬಡ್ಡಿಪೀನಲ್ ಇಂಟರೆಸ್ಟ್ ರೂಲ್ಸ್ ಪ್ರಕಾರ ಇದೆ. ಅದನ್ನೆಲ್ಲಾ ವಸೂಲು ಮಾಡುವುದಕ್ಕೆ ಲ್ಯಾಂಡ್ ರೆವಿನ್ಯೂ ಆಕ್ಟ್ನಲ್ಲಿರತಕ್ಕ ಕಲಂಗಳನ್ನು ಉಪಯೋಗ ಮಾಡಿ ವಸೂಲಾತಿಗೆ ಹೊರಡುತ್ತೇವೆ. ಅದರ ಬದಲು ಬಾಕಿದಾರರು ಏಕಕಾಲದಲ್ಲಿ ಹಣವನ್ನು ಕೊಡುವುದಕ್ಕೆ ಸಿದ್ಧರಾದರೆ, ಪೀನಲ್ ಇಂಟರೆಸ್ಟ್ ವಗೈರೆ ಬಗ್ಗೆ ವಿಚಾರ ಮಾಜಿ ಪ್ರಿನ್ಸಿಪಲ್ ಹಣಕ್ಕೆ ತೊಂದರೆ ಬರದಹಾಗೆ ಬಡ್ಡಿ ಪ್ರಮಾಣದಲ್ಲೂ ಸಹ ತೊಂದರೆ ಬರದಹಾಗೆ ರಾಜ್ಯದ ಇಂಟರೆಸ್ಟ್ ಕಾಯುವುದಕ್ಕೆ ಸಾಧ್ಯವಿದ್ದರೆ ನಿಜವಾಗಿಯೂ ಅದನ್ನು ವಿಚಾರ ವಿಚಾರ ಮಾಡಬಹುದು. ಆದರೆ ಆರ್ಗ್ಯುಮೆಂಟ್ಗೆ ಒಂದು ಸಾರಿ ಬಂದಾಗ ಕರ್ನಾಟಕ ಹೈಕೋರ್ಟ್ನಲ್ಲಿ ಒಂದು ಸಾರಿ ಈ ವಿಚಾರ ಚರ್ಚೆಗೆ ಬಂದಿತ್ತು ಎಂದು ನಾನು ಕೇಳಿದ್ದೇನೆ. ಆದರೆ ತೀರ್ಮಾನ ಇನ್ನೂ ಕೂಡ ಆಗಿಲ್ಲ. ಆದರೆ ಒಳ್ಳೆಯ ಸಲಹೆ.

ಶ್ರೀ ಎಂ.ವಿ. ವೆಂಕಟಪ್ಪ: ಸರ್ಕಾರಕ್ಕೆ ಆದಾಯ ಬರುವುದರಿಂದ ಬೇಗನೆ ತೀರ್ಮಾನ ಮಾಡಿ ಎಂದು ಒಂದು ಸಲಹೆ ಜೊತೆಗೆ ಭೂ ಕಂದಾಯ ಕಾಯಿದೆ ಪ್ರಕಾರ ಕ್ರಮ ಕೈಗೊಂಡಿರುವ ಕೇಸ್ಗಳು ಎಷ್ಟಿದೆ ಸ್ವಾಮಿ?

ಶ್ರೀ ಎಸ್. ಬಂಗಾರಪ್ಪ: ಇಲ್ಲಿ ಈಗಾಗಲೇ ಹೇಳಿದ್ದೇನೆ. ಪಟ್ಟಿಯಲ್ಲಿ ಕೊಟ್ಟಿದ್ದೇವೆ, ಒಟ್ಟು ಎಷ್ಟು ಕೇಸ್ ಬಾಕಿ ಇವೆ ಎಂದು. ಸುಮಾರು 100ಜನ ಆಗುತ್ತಾರೆ ಹೆಚ್ಚು ಕಡಿಮೆ. ನಾವು ಬಡ್ಡಿ ಬಿಡುತ್ತೇವೆ ಮುಂದೆ ಬನ್ನಿ ಎಂದು ಓಪನ್ನಾಗಿ ಹೇಳಿದರೆ ಕಷ್ಟವೇ. ಅದಕ್ಕೂ ಸರ್ಕಾರ ತಯಾರಾಗಿಲ್ಲ. ಏನಾದರೂ ಸಲಹೆಗಳು ಆ ರೀತಿ ಬಂದರೆ ನಮ್ಮ ರಾಜ್ಯದ ಹಿತ ಕಾಪಾಡಿಕೊಂಡು ನಾವು ವಿಚಾರ ಮಾಡಬಹುದು. ಕೋರ್ಟಿನಲ್ಲೂ ವಿಚಾರ ಮಾಡಬಹುದು. ಇಲ್ಲದಿದ್ದರೆ ನಮ್ಮ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಈಗಾಗಲೇ ಕೋರ್ಟಿನ ಮೂಲಕ ಕ್ರಮ ತೆಗೆದುಕೊಂಡಿದ್ದೇವೆ. ಅದನ್ನು ಮುಂದುವರೆಸಲೇಬೇಕಾಗುತ್ತದೆ. ಆದರೆ ಸಲಹೆ ಯೋಗ್ಯವಾಗಿದೆ, ಪರಿಶೀಲನೆ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಬಹಳ ಆಶ್ಚರ್ಯ. ನೀನು ಅತ್ತಹಾಗೆ ಇರು, ನಾನು ಹೊಡೊದಹಾಗೆ ಮಾಡುತ್ತೇನೆ ಅಂದಹಾಗೆ ಅವರ ಪ್ರಶ್ನೆ ಮತ್ತು ಇವರ ಉತ್ತರವಿದೆ. ಏಕೆಂದರೆ ರೈತರ ತಟ್ಟಿ, ಚೊಂಬು ಹೊತ್ತಿಕೊಂಡು ಹೋಗಿ ಅವರಿಗೆ ಸುಸ್ತಿ ಬಡ್ಡಿಯಾದರೂ ವಜಾ ಮಾಡಿ, ಬಡ್ಡಿಯಾದರೂ ವಜಾ ಮಾಡಿ ಎಂದರೆ, ಈ ಸರ್ಕಾರ ಕಲ್ಲಿಗಿಂತ ಗಟ್ಟಿಯಾಗಿ ಕುಳಿತಿದೆ. ಆದರೆ ಕೋಟ್ಯಾಂತರ ರೂಪಾಯಿ ಜನರ ಹಣವನ್ನು ಲೂಟಿ ಮಾಡಿರುವವರಿಗೆ ಅವರಿಂದ ಆ ರೀತಿ ಸಲಹೆಗಳು ಬಂದರೆ ಪರಿಶೀಲನೆ ಮಾಡುತ್ತೇವೆ ಎಂದು ಉದಾರವಾದ ನೀತಿಯನ್ನು ಉದಾರವಾದ ಮನಸ್ಸನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆ. ಈ ರೀತಿ ನಡೆಯುತ್ತಿದೆ, ಆಗುತ್ತದೆ ಎಂದು ನನಗೆ ಮೊದಲೇ ಗೊತ್ತಿತ್ತು.

ಅಧ್ಯಕ್ಷರು: ಪ್ರಶ್ನೆ ಕೇಳಬೇಕು.

ಶ್ರೀ ಸಿ. ಬೈರೆಗೌಡ: ಹೌದು. ಸ್ವಾಮಿ, ಇದೇ ರೀತಿಯಾದಂಥ ಔದಾರ್ಯವನ್ನು ಇದೇ ರೀತಿಯಾದ ಉದಾರ ಮನೋಭಾವನೆಯನ್ನು ಬೇರೆ ರಂಗದಲ್ಲಿ ಅಂದರೆ ಮುಖ್ಯವಾಗಿ ವ್ಯವಸಾಯ ರಂಗದಲ್ಲಿ ತೋರಿಸುತ್ತೀರಾ? ರೈತರು ವಿದ್ಯುಚ್ಛಕ್ತಿ ಹಣ ಕಟ್ಟಿಲ್ಲ ಎಂದು ಅವರ ಆಸ್ತಿ ಹರಾಜಾಗುತ್ತಿದೆ. ಸಾವಿರಾರು ರೂಪಾಯಿ ಕಟ್ಟಬೇಕಾಗಿದೆ. ಆದ್ದರಿಂದ ಅವರಿಗೆ ಕೂಡ ಜೌದಾರ್ಯ ತೋರಿಸುತ್ತೀರಾ? ಇಲ್ಲದಿದ್ದರೆ ನೀವು ಅಬ್ಯಾರಿ ದೊರೆಗಳ ಕೈಗೊಂಬೆ ಎಂದು ನಾನು ಹೇಳಲೇಬೇಕು.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರ ಗಮನಕ್ಕೆ ತರುವಂಥ ವಿಚಾರ ಅಂದರೆ ಕೋರ್ಟಿನಲ್ಲಿ ಸ್ಟೇ ಇರತಕ್ಕ, ಪೆಂಡಿಂಗ್ ಇರತಕ್ಕ ವಿಚಾರದ ಬಗ್ಗೆ ಪ್ರಶ್ನೆ ಇದೆ. ತಾವು ಬೇರೆ ಕೇಸ್ ಬಗ್ಗೆ ಪ್ರಸ್ತಾಪ ಮಾಡುತ್ತಾ ಇದ್ದೀರಿ. ನೀವು ರೈತರ ಬಗ್ಗೆ ಏನು ಭಾಷಣ ಮಾಡಿದ್ದೀರೋ ಅದರ ಹತ್ತರಷ್ಟು ಭಾಷಣ ಮಾಡಿರುವವರ ಪೈಕಿ ನಾನೂ ಒಬ್ಬ. ರೈತರ ಸಾಲ ವಜಾ ಮಾಡುವ ವಿಚಾರದಲ್ಲಿ ನಾನು ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಕನ್ನಡ ಆವೃತ್ತಿ ಓದಿ ನೋಡಿ. 8ನೇ ಪುಟ 8ನೇ ಪ್ಯಾರಾದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಹಣ ಯಾವರೀತಿ ಕೇಂದ್ರದಿಂದ ಮತ್ತು ಕೋ-ಆಪರೇಟೀವ್ ಸೆಕ್ಟಾರ್ನಿಂದ ಬಂದಿದೆ, ವಜಾ ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ ಎಂಬ ಮಾತನ್ನು ಸ್ಪಷ್ಟಪಡಿಸಿದ್ದೇನೆ. ಒಂದು ವೇಳೆ ರೈತರಿಗೆ ಆ ಕಾನೂನಿಗೆ ವಿರುದ್ಧವಾಗಿ ಹೋಗಿ ಜಪ್ತಿ ವಗೈರೆ ಏನಾದರೂ ಕಠಿಣ ಕ್ರಮ ತೆಗೆದುಕೊಂಡಿದ್ದರೆ ಅದು ತಪ್ಪು. ಆ ರೀತಿ ಮಾಡಿಸುವುದಿಲ್ಲವೆಂಬ ಮಾತನ್ನು ಹೇಳಿದ್ದೇನೆ. 10 ಸಾವಿರ ರೂಪಾಯಿಗಳೊಳಗೆ ಇರುವ ರೈತರಿಗೆ ರಕ್ಷಣೆ ಕೊಡುತ್ತೇವೆ ಎಂಬ ಮಾತನ್ನು ಪದೇಪದೇ ಹೇಳಿದ್ದೇನೆ. ಮತ್ತೆ ರೈತರ ಬಗ್ಗೆ ಎಂದರೆ? ಅವರೂ ಕೋರ್ಟಿಗೆ ಇದೇ ಟೈಪ್ ಹೋಗಲಿ, ಅದು ಕೂಡ ಕೋರ್ಟಿನಲ್ಲಿ ತೀರ್ಮಾನ ಆಗಲಿ ಆದರೆ.....

ಶ್ರೀ ಸಿ. ಬೈರೇಗೌಡ: ರೈತರು ಕೋರ್ಟಿಗೆ ಹೋಗಬೇಕೆಂದರೆ ಅವರ ಹತ್ತಿರ ದುಡ್ಡು ಇರಬೇಕಲ್ಲ. ಅವರಿಗೆ ಗೊತ್ತಿರಬೇಕಲ್ಲ. ಇವರಿಗಾದರೆ ಎಲ್ಲಾ ಗೊತ್ತಿದೆ. ಯಾರಿಗೆ ಏನು ಮಾಡಬೇಕು,ಯಾರಿಗೆ ಬೆಣ್ಣೆ ಹಚ್ಚಬೇಕು ಅದೆಲ್ಲಾ ಇವರಿಗೆ ಗೊತ್ತಿದೆ. ರೈತರಿಗೆ ಅದು ಗೊತ್ತಿರಬೇಕಲ್ಲ.

ಶ್ರೀ ಎಸ್. ಬಂಗಾರಪ್ಪ: ನೀವು ಪೂರ್ತಿ ಕೇಳಲಿಲ್ಲ ಉತ್ತರವನ್ನು. ಸ್ಟೇ ಆಗಿರತಕ್ಕದ್ದು ಮತ್ತು ಮುಖ್ಯಮಂತ್ರಿಗಳ ಉದಾರ ನೀತಿ ಎಂದು ಹೇಳಿದ್ದು ನಮ್ಮ ಕಾಲದ್ದಲ್ಲ, ನಿಮ್ಮ ಕಾಲದಿಂದ ಇರತಕ್ಕಂಥ ಉದಾರ ನೀತಿ ಇದು.

ಶ್ರೀ ಸಿ. ಬೈರೇಗೌಡ: ಯಾರುಯಾರು ಏನೇನು ಮಾಡಿದ್ದಾರೆ ಎಂಬುದನ್ನು ದಯವಿಟ್ಟು ಹೇಳಿ. ಈ ರಾಜ್ಯದ ಜನತೆಗೆ ಗೊತ್ತಾಗಲಿ. ಅದಕ್ಕೇನಂತೆ,

ಶ್ರೀ ಎಸ್. ಬಂಗಾರಪ್ಪ : ಬೈರೇಗೌಡರೆ, ನಾನು ಹೇಳುವುದು, ಉದಾರ ನೀತಿ ಎಂದು ನೀವು ಹೇಳಿದಿರಲ್ಲ. ಆ ಉದಾರ ನೀತಿ ದೊಡ್ಡ ಪ್ರಮಾಣದಲ್ಲಿ ತನ್ನ ವೈಶಾಲ್ಯತೆ ಹೊತ್ತುಕೊಂಡು ಪ್ರಾರಂಭ ಆಗಿದ್ದೇ ಹಲವಾರು ವರ್ಷಗಳ ಹಿಂದಿನ ಕಥೆ ಇದು. ಇತ್ತೀಚೆಗೆ ಯಾರಾದರೂ ಒಬ್ಬೊಬ್ಬರು ನಾಲ್ಕು ಜನ ಸ್ಟೇ ತೆಗೆದುಕೊಂಡಿರುವವರೂ ಇಲ್ಲಿ ಸೇರಿದ್ದಾರೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಕೋರ್ಟ್‌ಗೆ ಹೋಗುವುದನ್ನು ನಿಲ್ಲಿಸುವುದಕ್ಕಾಗುವುದಿಲ್ಲ ಮಾನ್ಯ ಸಭಾಧ್ಯಕ್ಷರೆ.

ಅದು ರಾಜ್ಯಾಂಗಬದ್ಧವಾಗಿ ಇರತಕ್ಕ ಹತ್ತು. ಹಲವಾರು ಕಾರಣದಿಂದ ಅವರು ಸ್ಟೇ ಕೊಡುತ್ತಾರೆಂದು ನಿಮಗೆ ಗೊತ್ತಿದೆ. ಇದರಲ್ಲಿ ಏನಾದರು ಉದಾರ ನೀತಿ ಇದ್ದರೆ ಆಗಿನ ಕಾಲದಿಂದ ಮುಂದುವರಿದು ಬಂದಿರತಕ್ಕ ಉದಾರ ನೀತಿ.

ಶ್ರೀ ವಾಟಾಳ್ ನಾಗರಾಜ್: ಆಗಿನ ಕಾಲ ಎಂದರೆ ಯಾವ ಕಾಲ?

ಶ್ರೀ ಎಸ್. ಬಂಗಾರಪ್ಪ: ಆಗಿನ ಕಾಲ ಎಂದರೆ ಅವರಿಗೂ ಗೊತ್ತಾಗುತ್ತದೆ,ನಿಮಗೂ ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಆಗಿನ ಕಾಲ ಎಂದರೆ ಯಾವ ಕಾಲ? ಕಲಿಯುಗವೋ ದ್ವಾಪರ ಯುಗವೋ ಎಂದು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ: ಅದುದರಿಂದ ರೈತರಿಗೆ ವಿರೋಧ ಮಾಡತಕ್ಕ ಪ್ರಶ್ನೆ ಬರುವುದಿಲ್ಲ. ಆ ಪ್ರಶ್ನೆ ಇಲ್ಲಿ ಇಲ್ಲ. ಕೋರ್ಟಿನಲ್ಲಿ ಇರತಕ್ಕದ್ದು ಅರ್ಜಿದಾರರದ್ದು ಹಣ ಬಾಕಿ ಏನಿದೆ ಅದನ್ನು ಕೇಳತಕ್ಕ ಪ್ರಶ್ನೆ. ಇದಕ್ಕೆ ಸೀಮಿತವಾಗಿ ಉತ್ತರ ಕೊಟ್ಟಿದ್ದೇವೆ, ನಿಜ ಹೇಳಬೇಕೆಂದರೆ,ಒಂದು ಸಾರಿ ಹೈಕೋರ್ಟಿನಲ್ಲಿ ಪ್ರಾಸ್ತಾವಿಕವಾಗಿ ಮಾತನಾಡುವಾಗ ಈ ಬಗ್ಗೆ ಪ್ರಸ್ತಾವ ಮಾಡಿದ್ದೇನೆ. ಸ್ವೇ ಕೊಟ್ಟರೆ ಸರ್ಕಾರ ಹೇಗೆ ನಡೆಯಬೇಕು, 80-100 ಕೋಟಿ ರೂ.ನಿಂತರೆ ಸರ್ಕಾರ ನಡೆಸುವುದು ಕಷ್ಟವಾಗುತ್ತದೆ. ಇದರಿಂದ ಬಹಳ ಕಷ್ಟ ಆಗುತ್ತದೆಂದು ಹೈಕೋರ್ಟಿನ ಗಮನಕ್ಕು ತಂದಿದ್ದೇವೆ. ಆ ಮಟ್ಟದಲ್ಲೂ ನಾವು ಸರ್ಕಾರದ ಪರವಾಗಿ ಏನು ತಿಳಿಸಬೇಕೋ ಅದನ್ನು ನಾವು ತಿಳಿಸಿದ್ದೇವೆ.

ಹೆಣ್ಣು ಮಕ್ಕಳ ದಿನಾಚರಣೆಯ ಬಗ್ಗೆ

142 - ಶ್ರೀಮತಿ ಮೋಟಮ್ಮ (ಮೂಡಿಗೆರೆ), ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷ ಸಾರ್ಕ್ ಹೆಣ್ಣು ಮಗುವಿನ ವರ್ಷ ಎನ್ನುವುದು ಸರ್ಕಾರದ ಗಮನದಲ್ಲಿಯೆ?

ಆ) ಹಾಗಾದರೆ ಹೆಣ್ಣು ಮಕ್ಕಳ ಏಳಿಗೆಗಾಗಿ ಸರ್ಕಾರದ ಹೊಸ ಯೋಜನೆಗಳೇನು? ಗ್ರಾಮೀಣ ಮಟ್ಟದಲ್ಲಿ ಈ ಬಗ್ಗೆ ತಿಳುವಳಿಕೆ ಕೊಡಲು ಏನು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಿ.ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು) :

ಅ) ಇದೆ.

ಆ) ರಾಜ್ಯ ಸರ್ಕಾರವು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಹೆಣ್ಣು ಮಗುವಿನ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಜಿಲ್ಲಾ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

1) ಗ್ರಾಮೀಣ ಹೆಣ್ಣು ಮಕ್ಕಳಿಗೆ ವಸತಿ ನಿಲಯ ಪ್ರಾರಂಭಿಸುವುದು.
2) ವೃತ್ತಿಪರ ಶಿಕ್ಷಣಪಡೆಯುವ ಹೆಣ್ಣು ಮಕ್ಕಳಿಗೆ ಆರ್ಥಿಕಧನ ಸಹಾಯ ನೀಡುವುದು.
3) ಹೆಣ್ಣು ಮಕ್ಕಳಿಗೆ ಕೈಗಾರಿಗಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವುದು.
4) ಹೆಣ್ಣು ಮಕ್ಕಳ ಸ್ಥಾನಮಾನ ಮತ್ತು ಪ್ರಾಮುಖ್ಯತೆ ಬಗ್ಗೆ ಗ್ರಾಮೀಣ ಜನರಲ್ಲಿ ಜಾಗೃತಿ ಮೂಡಿಸುವುದು.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸಾರ್ಕ್ ಹೆಣ್ಣು ಮಗುವಿನ ವರ್ಷ ಆಚರಣೆ ಮಾಡುವ ಬಗ್ಗೆ ನಾನು ಕೇಳಿದ ಪ್ರಶ್ನೆಗೆ "ರಾಜ್ಯ ಸರ್ಕಾರವು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಹೆಣ್ಣು ಮಗುವಿನ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಜಿಲ್ಲಾ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಿದೆ" ಎಂದು ಉತ್ತರ ಕೊಟ್ಟಿದ್ದಾರೆ. ಅದರೆ ಇದೇ ವರ್ಷ ಸಾರ್ಕ್ ಹೆಣ್ಣು